ಕರ್ನಾಟಕ ವಿಧಾನ, ಸಭೆ

583 ಶ್ರೀ ಹ್ಯಾರಿಸ್ ಎನ್.ಎ(ಶಾಂತಿನಗರ)

ಮಾನ್ಯ ಮುಖ್ಯಮಂತ್ರಿಗಳು

ಅ) ಕನ್ನಡ ಮತ್ತು ಸಂಸ್ಕೃತಿ ಇಲಾಖಾ ವ್ಯಾಪ್ತಿಯಲ್ಲಿ ಬರುವ ಅಕಾಡೆಮಿಗಳ ಸುವ್ಯವಸ್ಥಿತ ಕಾರ್ಯನಿರ್ವಹಣೆಗೆ ಅವಶ್ಯಕ ಮೂಲ ಸೌಕರ್ಯಗಳನ್ನು ಒದಗಿಸಲಾಗಿದೆಯೇ; ಹಾಗಿಲ್ಲದಿದ್ದಲ್ಲಿ, ಒದಗಿಸಿಕೊಡಲು ಸರಕಾರದ ಸಕಾಲಿಕ ಕ್ರಮಗಳೇನು;

ಹೌದು.

ಕನ್ನಡ ಮತ್ತು ಸಂಸ್ಕೃತಿ ಇಲಾಖಾ ವ್ಯಾಪ್ತಿಗೆ 13 ಅಕಾಡೆಮಿಗಳು ಬರಲಿದ್ದು ಅವುಗಳಿಗೆ ಅವಶ್ಯ ಮೂಲ ಸೌಕರ್ಯಗಳನ್ನು ಒದಗಿಸಲಾಗಿದೆ. ಅಂದರೆ ಪೂರಕ ಸಿಬ್ಬಂದಿ, ಕಚೇರಿ ಸ್ಥಳಾವಕಾಶ, ದೂರವಾಣಿ ಹಾಗೂ ಅಕಾಡೆಮಿ ಕಾರ್ಯಚಟುವಟಿಕೆಗಳಿಗೆ ಅನುದಾನ ಇವುಗಳನ್ನು ಒದಗಿಸಲಾಗಿದೆ. ಹೊಸದಾಗಿ ಅಸ್ಥಿತ್ವಕ್ಕೆ ಬಂದ ಯಕ್ಷಗಾನ ಅಕಾಡೆಮಿಗೂ ಸೂಕ್ತ ಸ್ಥಳಾವಕಾಶ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಬ್ಯಾರಿ ಅಕಾಡೆಮಿ ಇದೀಗ ಅಸ್ಥಿತ್ವಕ್ಕೆ ಬಂದಿದ್ದು ಅದರ ಕಾರ್ಯಚಟುವಟಿಕೆಗಳನ್ನು ಪ್ರಾರಂಭಿಸಲು ಅವಶ್ಯ ಕ್ರಮ ಕೈಗೊಳ್ಳಲಾಗುತ್ತಿದೆ.

ಆ) ಈ ಅಕಾಡೆಮಿಗಳಿಗೆ ಮಂಜೂರು ಮಾಡುತ್ತಿರುವ ವಾರ್ಷಿಕ ಅನುದಾನವು ತೀರಾ ಕಡಿಮೆಯಾಗಿದ್ದು, ಅದನ್ನು ಅಕಾಡೆಮಿಗಳ ಕಾರ್ಯವ್ಯಾಪ್ತಿ ಮತ್ತು ವಿಷಯ ವ್ಯಾಪ್ತಿಗೆ ಅನುಗುಣವಾಗಿ ಹೆಚ್ಚಿಸುವ ಕುರಿತು ಸರಕಾರದ ಕ್ರಮಗಳೇನು?

ಸರ್ಕಾರವು ರಚಿಸಿರುವ 13 ಅಕಾಡೆಮಿಗಳು ಅವುಗಳ ಸಿಬ್ಬಂದಿ ವೇತನ ಹಾಗೂ ಕಾರ್ಯಚಟುವಟಿಕೆಗಳಿಗೆ ಸಮಾನವಾಗಿ ಅನುದಾನ ಹಂಚಿಕೆ ಮಾಡಲಾಗಿದೆ. ಆದರೆ ಕೆಲವು ಅಕಾಡೆಮಿಗಳ ವ್ಯಾಪ್ತಿ ಮತ್ತು ಕಾರ್ಯ ಬಾಹುಳ್ಯ ಜಾಸ್ತಿ ಇರುವುದರಿಂದ ಅಂತಹ ಅಕಾಡೆಮಿಗಳಿಗೆ ಹೆಚ್ಚುವರಿ ಅನುದಾನವನ್ನು ನೀಡುವ ಬಗ್ಗೆ ಆರ್ಥಿಕ ಪರಿಸ್ಥಿತಿಯನ್ನು ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.